**ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಭಾಲ್ಕಿ**

**ಸಿ.ಸಿ. ನಂ 801/2020**

ದೂರುದಾರ : ಸರ್ಕಾರದ ಪರವಾಗಿ ಧನ್ನೂರಾ ಪೋಲಿಸ ಠಾಣೆ, ಭಾಲ್ಕಿ.

ವಿರುದ್ಧ

ಆರೋಪಿತರು :

1. ಮಲ್ಲಿಕಾರ್ಜನ ತಂದೆ ಸಿದ್ದಪ್ಪ ಜ್ಯಾಂತೆ,
   ವಯಾಃ 28 ವರ್ಷ ವೃತ್ತಿಃ ಒಕ್ಕಲುತನ,
   ಸಾಃ ಮಳಚಾಪೂರ
   ತಾ: ಭಾಲ್ಕಿ, ಜಿ: ಬೀದರ.

2. ರಮೇಶ ತಂದೆ ಕಾಶಿನಾತ ಹಲಬರ್ಗೆ,
   ವಯಾಃ 35 ವರ್ಷ ವೃತ್ತಿಃ ಒಕ್ಕಲುತನ,
   ಸಾಃ ಧನ್ನೂರಾ (ಹೆಚ್),
   ತಾ: ಭಾಲ್ಕಿ, ಜಿ: ಬೀದರ.

**ದೋಷಾರೋಪಣ**

ನಾನು ದೇಶಭೂಷಣ ಕೌಜಲಗಿ, ಬಿ.ಎ.,ಎಲ್.ಎಲ್.ಬಿ., ಪ್ರ.ದ.ನ್ಯಾದಂ ಭಾಲ್ಕಿ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ.

ದಿನಾಂಕ 08/12/2013 ರಿಂದ ದಿನಾಂಕ 08/12/2015 ರ ಸಾಯಂಕಾಲ 04-00 ರ ಸಮಯದಲ್ಲಿ ಧನ್ನೂರಾ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಆರೋಪಿಯಾದ ನೀವು ಮಳಚಾಪೂರ

ಗ್ರಾಮದ ಶಿವಾರದಲ್ಲಿ ಸರಕಾರಿ ಜಮೀನಿನಲ್ಲಿ ಪ್ರತ್ಯೇಕವಾಗಿ 2 ಕಡೆಗೆ ಸರಕಾರದಿಂದ ಅಥವಾ ಸಂಭಂಧಪಟ್ಟ ಇಲಾಖೆಯವರಿಂದ ಯಾವುದೆ ಅನುಮತಿ ಪಡೆಯದೇ ಅನಧೀಕೃತವಾಗಿ ಕೆಂಪು ಕಲ್ಲು ಕೊರೆಯುವ ಸ್ಥಳ ಗುರುತಿಸಿಕೊಂಡು ಕಲ್ಲು ಕೊರೆಯುವ ಯಂತ್ರಗಳ ಮೂಲಕ ಸುಮಾರು 9495 ಮೇಟ್ರಿಕ ಟನ ಅದರ ಸರಕಾರಿ ಅಂ.ಕಿ.5,69,700/- ರೂಪಾಯಿದಷ್ಟು ಮೌಲ್ಯದಷ್ಟು ಕಲ್ಲನ್ನು ಕಳ್ಳತನದಿಂದ ಗಣಿಗಾರಿಕೆ ಮಾಡುವ ಮೂಲಕ ಭಾ.ದಂ.ಸಂ ಕಲಂ 379 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ.

**<u>ಆರೋಪಿ ನಂ.1 ಮತ್ತು 2:</u>**

ಪ್ರಶ್ನೆ1: ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೆ **?**

ಉತ್ತರ:

ಪ್ರಶ್ನೆ2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ **?**

ಉತ್ತರಃ

(ದೋಷಾರೋಪಣೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರಿ ದೋಷಾರೋಪಣೆಯು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳ: ಭಾಲ್ಕಿ

ದಿಃ 02/09/2025

**ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.**

**ಭಾಲ್ಕಿ**